# ಸ್ವತಂತ್ರ ಸೃಜನಶೀಲ ಬರೆವಣಿಗೆಯನ್ನು ಬಲಪಡಿಸುವುದು

ಕಲಂದರ್. ಎಸ್

ಯಾವುದೇ ಕಲಿಕೆಯು ಜಡವಲ್ಲ; ಅದೊಂದು ಚಲನಶೀಲವಾದ ವಿಕಸನವಾಗುತ್ತಾ ಹೋಗುವ ಪ್ರಕ್ರಿಯೆ. ಹೊಸ ಕಲ್ಪನೆಗಳು ಮತ್ತು ಚಿಂತನೆಗಳು ಹಳೆಯವನ್ನು ಬದಲಾಯಿಸುತ್ತಾ ಹೊರ–ಹೊಮ್ಮುತ್ತಿರುತ್ತವೆ. ಇಂತಹ ಬದಲಾವಣೆಯು ಸತತವಾದ ಅಭ್ಯಾಸ, ಅನುಭವ ಮತ್ತು ಹೊಸ ಕಲ್ಪನೆಗಳನ್ನು ಅನುಸರಿಸುತ್ತಾ ಹೋಗುವುದರ ಮೇಲೆ ಅವಲಂಬಿತವಾಗಿರುತ್ತದೆ. ಏಕೆಂದರೆ ಈ ಪ್ರಕ್ರಿಯೆಯಲ್ಲಿ ಮಗುವಿನ ಆಸಕ್ತಿಗೆ ಒಂದು ಮುಖ್ಯವಾದ ಪಾತ್ರವಿದೆ. ನಾವು ಒಂದು ಸೃಜನಶೀಲ ಚಟುವಟಿಕೆಯಲ್ಲಿ ಮಗುವಿನ ಆಸಕ್ತಿಯನ್ನು ಉತ್ತೇಜಿಸುವುದು ಹೇಗೆ ಎಂಬುದು ಮುಖ್ಯವಾದ ಪರಿಗಣನೆಯಾಗಿರುತ್ತದೆ. ಒಂದು ಪ್ರಮಾಣಿತ ಮಾದರಿ ಬರೆವಣಿಗೆಯಿಂದ (ಸರಳವಾದ ವಾಕ್ಯಗಳು ಪದಪುಂಜಗಳು ವಿವರಣೆ ಇತ್ಯಾದಿ) ಮಗುವನ್ನು ಸ್ವತಂತ್ರ ಮತ್ತು ಸೃಜನಶೀಲ ಅಭಿವ್ಯಕ್ತಿಯತ್ತ (ಯಾವುದೇ ವಿಷಯವನ್ನು ತನ್ನದೇ ಆದ ಅನನ್ಯವಾದ ಶೈಲಿಯಲ್ಲಿ ಮುಂದಿಡುವುದು, ತರ್ಕಬದ್ಧವಾದ ವಿಚಾರದ ಮೂಲಕ ತನ್ನ ಚಿಂತನೆಯನ್ನು ಸಮರ್ಥಿಸುವುದು) ಕೊಂಡೊಯ್ಯುವುದು ಹೇಗೆ ಎಂಬುದು ಯಾವುದೇ ಶಿಕ್ಷಕರಿಗಾದರೂ ಒಂದು ಸವಾಲೇ ಸರಿ. ಈ ಲೇಖನವು ಅದಕ್ಕೆ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತದೆ.

ಸೃಜನಶೀಲ ಚಿಂತನೆಯನ್ನು ಅಥವಾ ಕಲ್ಪನೆಯನ್ನು ಸ್ವತಂತ್ರ ಬರೆವಣಿಗೆಯೊಂದಿಗೆ ಸಮ್ಮಿಲನಗೊಳಿಸಿದಾಗ ಅಂತಹ ಬರೆವಣಿಗೆಯು ಉಜ್ವಲವಾಗುತ್ತದೆ. ತನ್ನದೇ ಆದ ಅನನ್ಯವಾದ ಶೈಲಿ, ಪದಸಂರಚನೆಯನ್ನು ಉಪಯೋಗಿಸುತ್ತಾ, ತಾರ್ಕಿಕ ವಿಚಾರಶೀಲತೆಯೊಂದಿಗೆ ಚಿಂತನೆಯನ್ನು ಮುಂದಿಟ್ಟಾಗ ಅದು ಸ್ವತಂತ್ರ ಬರೆವಣಿಗೆಯನ್ನು ಬೆಳೆಸುತ್ತದೆ ನಮ್ಮ ತರಗತಿ ಕೊಠಡಿಗಳಲ್ಲಿ ಅಂತಹ ಸ್ವತಂತ್ರವಾದ ಮತ್ತು ಸೃಜನಶೀಲವಾದ ಬರೆವಣಿಗೆಯ ಕೌಶಲಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಲು ಸಾಕಷ್ಟು ಅವಕಾಶಗಳಿವೆಯೇ? ಅಂತಹ ಪ್ರಕ್ರಿಯೆಗಳಿಗೆ ನಮ್ಮಲ್ಲಿರುವ ಕಲಿಕೆಯ ಫಲಿತಾಂಶಗಳು, ನಾವು ಒದಗಿಸಿರುವ ಬೋಧನ ಶಾಸ್ತ್ರದ ಮಾದರಿಗಳು ಮತ್ತು ಅವಕಾಶಗಳನ್ನು ವಿಶ್ಲೇಷಿಸಬೇಕಾದ ಅಗತ್ಯವಿದೆ.

ಕಲಿಕೆಯ ಫಲಿತಾಂಶಗಳನ್ನು ಆಧರಿಸಿ ಒಬ್ಬ ಭಾಷಾ ಶಿಕ್ಷಕರು ಬೇರೆ ಬೇರೆ ಕೌಶಲಗಳನ್ನು ಪರಿಚಯಿಸಲು ವಿಭಿನ್ನವಾದ ಬೋಧನ ವಿಧಾನಗಳನ್ನು ಉಪಯೋಗಿಸುತ್ತಾರೆ. ವಿದ್ಯಾರ್ಥಿ–ಗಳು ಕೌಶಲಗಳನ್ನು ಕಲಿಯುವುದನ್ನು ಮನೆ ಕೆಲಸ, ಅಧ್ಯಯನ, ಅವಧಿ ಪರೀಕ್ಷೆಗಳು ಇತ್ಯಾದಿಗಳನ್ನು ಮೌಲ್ಯ–ಮಾಪನ ಮಾಡುವುದರ ಮೂಲಕ ಬಲಪಡಿಸಲಾಗುತ್ತದೆ.

ಅದೇನೇ ಇರಲಿ ಸೃಜನಶೀಲ ಬರೆವಣಿಗೆಗೆ ಸಂಬಂಧಿಸಿದಂತೆ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ ಎಂದರೆ; ಈ ಕೌಶಲಗಳ ಮೇಲೆ ಪ್ರಭುತ್ವವನ್ನು ಸಾಧಿಸಲು ಮತ್ತು ಹೊಸದಾದ ಸ್ವೋಪಜ್ಞವಾದ ಬರೆವಣಿಗೆಯನ್ನು ಸೃಷ್ಟಿಸಲು ವಿದ್ಯಾರ್ಥಿಗಳಿಗೆ ಸಮಯ ಸಾಕಷ್ಟು ಸಿಗುತ್ತದೆಯೇ? ಇದಕ್ಕೆ ಉತ್ತರವೆಂದರೆ ಇಲ್ಲ ಎಂಬುದು. ಹೀಗಿರುವಾಗ ಮಕ್ಕಳಲ್ಲಿ ಸ್ವತಂತ್ರವಾದ ಮತ್ತು ಸೃಜನಶೀಲವಾದ ಬರೆವಣಿಗೆಯ ಕೌಶಲಗಳನ್ನು ಬೆಳೆಸುವುದು ಮುಖ್ಯವೇ ಎಂಬ ಪ್ರಶ್ನೆಯನ್ನು ಶಿಕ್ಷಕರೊಬ್ಬರು ಪ್ರಶ್ನಿಸುವುದು ಸಹಜವಲ್ಲವೇ? ಸೃಜನಶೀಲ ಬರೆವಣಿಗೆಯ ಅನುಕೂಲಗಳೇನು? ಕಥೆಗಳನ್ನು ಮತ್ತು ಪದ್ಯಗಳನ್ನು ಬರೆಯುವುದರ ಮೂಲಕ ಒಂದು ಮಗು ಏನನ್ನು ಸಾಧಿಸುತ್ತದೆ? ಅದಂತೂ ಆಹಾರ, ನೀರು, ಗಾಳಿ ಅಥವಾ ಉದ್ಯೋಗದಂತೆ ಉತ್ತಮ ಜೀವನಕ್ಕೆ ಮೂಲಭೂತ ಆವಶ್ಯಕತೆಯಲ್ಲವಲ್ಲ! ಆದರೆ ನಾವು ಈ ವಿಷಯವನ್ನು ಆಳವಾಗಿ ಗಮನಿಸಿದರೆ ದಿನನಿತ್ಯದ ಸಮಸ್ಯೆಗಳನ್ನು ಪರಿಹರಿಸುವುದನ್ನು ಕಲಿಯುವುದು ಮತ್ತು ಸಾಮಾಜಿಕ ಮತ್ತು ಸಂವಹನದ ಕೌಶಲಗಳನ್ನು ಕಲಿಯುವುದು ಬದುಕಿಗೆ ಮುಖ್ಯ. ಮತ್ತು ಇವುಗಳನ್ನು ಒಂದೇ ಒಂದು ದಿನದಲ್ಲಿ ಗಳಿಸಿಕೊಳ್ಳಲು ಸಾಧ್ಯವಿಲ್ಲ. ಇವುಗಳು ಸತತವಾಗಿ ಅಭ್ಯಾಸ ಮಾಡುವುದರ ಮೂಲಕ ಮತ್ತು ಉಪಯೋಗಿಸುವುದರ ಮೂಲಕ ಮಾತ್ರ ಅಭಿವೃದ್ಧಿ ಹೊಂದುತ್ತವೆ. ಇವೆಲ್ಲವೂ ಸಹ ವ್ಯಕ್ತಿಯೊಬ್ಬನ ಸ್ವತಂತ್ರ ಚಿಂತನೆ ಮತ್ತು ಸೃಜನಶೀಲತೆಯ ಭಾಗವಾಗಿರುತ್ತವೆ.

ನಾವು ಮಕ್ಕಳಲ್ಲಿ ಸ್ವತಂತ್ರವಾದ ಮತ್ತು ಸೃಜನಶೀಲವಾದ ಬರೆವಣಿಗೆಯ ಸಾಮರ್ಥ್ಯವನ್ನು ಬೆಳೆಸಬೇಕೆಂದಿದ್ದರೆ, ಅವರು ತಮ್ಮ ಭಾವನೆಗಳನ್ನು, ಅನುಭವಗಳನ್ನು, ವಿಚಾರಗಳನ್ನು, ಕಲ್ಪನೆಗಳನ್ನು, ಊಹೆಗಳನ್ನು ಮತ್ತು ತರ್ಕವನ್ನು ಬೇರೆ ಬೇರೆ ರೀತಿಯಲ್ಲಿ ಅಭಿವ್ಯಕ್ತಿಪಡಿಸಲು ಅವಕಾಶ ಮಾಡಿಕೊಡುವುದು ಮೊದಲನೆಯ ಹೆಜ್ಜೆಯಾಗುತ್ತದೆ. ನಾವು ಈ ದ್ವಾರಗಳನ್ನು ತೆರೆದಿಟ್ಟಾಗ ಮಾತ್ರ ಮಕ್ಕಳು ಸ್ವತಂತ್ರ ಮತ್ತು ಸೃಜನಶೀಲ ಬರೆವಣಿಗೆಯೆತ್ತ ಮುಂದಡಿ ಇಡಬಹುದು. ಇದನ್ನು ಒಂದು ನಿರಂತರ ಪ್ರಕ್ರಿಯೆಯಾಗಿ ಮಾಡಲು ನಾವೇನು ಮಾಡಬಹುದು ಎಂಬುದನ್ನು ನೋಡೋಣ.

ಸ್ವತಂತ್ರ ಮತ್ತು ಸೃಜನಶೀಲ ಬರೆವಣಿಗೆಯನ್ನು ಉತ್ತೇಜಿಸಲು ಕರ್ನಾಟಕದಲ್ಲಿ ಪ್ರಸಕ್ತ ಜಾರಿಯಲ್ಲಿರುವ ಕೆಲವು ಕಲಿಕೆಯ ಚಟುವಟಿಕೆಗಳು.

| | |
|---|---|
| 1 | ಒಂದು ಚಿತ್ರವನ್ನು ಬರೆದು ಅದರ ಕೆಳಗಡೆ ತಮ್ಮ ಮನೆಯ ಭಾಷೆಯಲ್ಲಿ ಅದು ಏನೆಂದು ಬರೆಯುವುದು. ಉದಾಹರಣೆಗೆ ಒಂದು ಬೀಸಣಿಗೆಯ ಚಿತ್ರವನ್ನು ಬರೆಯಿರಿ ಮತ್ತು ಕೆಳಗೆ ಅದರ ಹೆಸರನ್ನು ಬರೆಯಿರಿ. (ಕನ್ನಡದಲ್ಲಿ ಬೀಸಣಿಗೆ ಎಂದು). |
| 2 | ಜೀವನದ ಅನುಭವಗಳ ಕುರಿತು ಮತ್ತು ಅವರು ತಮ್ಮ ಸುತ್ತಲೂ ನೋಡುವ ವಸ್ತುಗಳ ಕುರಿತು ಬರೆಯುವುದು. |
| 3 | ತಮಗೆ ಇಷ್ಟವಾದ ವಿಷಯಗಳ ಮೇಲೆ ಸಣ್ಣಕಥೆಗಳನ್ನು ಅಥವಾ ಪದ್ಯಗಳನ್ನು ಬರೆಯುವುದು ಮತ್ತು ಅದನ್ನು ತರಗತಿಯಲ್ಲಿ ಓದುವುದು. |
| 4 | ಕಥೆಗಳು ಪದ್ಯಗಳು ಮತ್ತು ವಿವರಣೆಗಳನ್ನು ಬರೆಯುವಾಗ ಭಾಷೆಯನ್ನು ಹೆಚ್ಚು ಸೃಜನಶೀಲವಾಗಿ ಉಪಯೋಗಿಸುವುದು. |
| 5 | ತಮ್ಮದೇ ಆದ ಕಲ್ಪನೆಗೆ ಅನುಸಾರವಾಗಿ ತಮ್ಮದೇ ಮಾತುಗಳಲ್ಲಿ ಕಥೆಗಳನ್ನು ಬರೆಯುವುದು. |
| 6 | ಬೇರೆಯವರ ಅನುಭವಗಳ ಬಗ್ಗೆ ಅಥವಾ ಬೇರೆಯವರು ಮಾತಾಡಿಕೊಳ್ಳುತ್ತಿರುವುದರಿಂದ ಅವರೇನು ಅರ್ಥಮಾಡಿಕೊಳ್ಳುತ್ತಾರೋ ಅದರ ಬಗ್ಗೆ ಬರೆಯುವುದು. ಉದಾಹರಣೆಗೆ: ಬೀದಿಯಲ್ಲಿ, ಬಸ್ ನಿಲ್ದಾಣ ಅಥವಾ ನಗರದ ಚೌಕಗಳಂತಹ ಸಾರ್ವಜನಿಕ ಸ್ಥಳಗಳಲ್ಲಿ ನಡೆಯುವ ಮಾತುಕತೆಗಳು. |
| 7 | ಭಿತ್ತಿಪತ್ರಗಳ ರಚನೆ, ಬರೆಯುವುದು ಮತ್ತು ವಿಷಯಸಂಗ್ರಹಣೆ |
| 8 | ಚಾಲ್ತಿಯಲ್ಲಿರುವ ಭಾಷೆಯ ವೈಶಿಷ್ಟ್ಯಗಳನ್ನು ಮತ್ತು ಪದ್ಧತಿಯನ್ನು ಉಪಯೋಗಿಸುವುದು ಉದಾಹರಣೆ: ಪದ್ಯ ಒಂದರ ಅರ್ಥವನ್ನು ಮತ್ತು ಲಯವನ್ನು ಗ್ರಹಿಸಿ ಅದರೊಳಗಿನ ಪದಗಳನ್ನು ಬದಲಾಯಿಸುವುದು. |
| 9 | ಲೇಖನಗಳನ್ನು ಯಾರು ಓದುತ್ತಾರೆ ಎಂಬುದನ್ನು ಮತ್ತು ಬರೆವಣಿಗೆಯ ಉದ್ದೇಶವನ್ನು ಮನಸ್ಸಿನಲ್ಲಿ ಅರ್ಥಮಾಡಿಕೊಂಡು ಪರಿಣಾಮಕಾರಿಯಾಗಿ ಬರೆಯುವುದು. |

## ಪಠನಗಳನ್ನು ಸಂಘಟಿಸುವುದು

ನಾವು ನಮ್ಮ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಕಥೆಗಳನ್ನು ಮತ್ತು ಪದ್ಯಗಳನ್ನು ಬರೆಯಲು ಅವಕಾಶಗಳನ್ನು ನೀಡುತ್ತೇವೆ. ಇವು ನಿರೀಕ್ಷಿತ ಕಲಿಕಾ ಫಲಿತಾಂಶಗಳ ಮೇಲೆ ಆಧಾರಿತವಾಗಿವೆ. ತಮ್ಮ ಕಲ್ಪನಾ ಶಕ್ತಿಯು ಗಡಿಗಳಿಲ್ಲದ ಕ್ಷಿತಿಜಗಳತ್ತ ಹಾರುವಂತೆ ಕಥೆಗಳನ್ನು ಪದ್ಯಗಳನ್ನು ಬರೆಯಲು ನಾವು ಅವರಿಗೆ ಪ್ರೇರೇಪಿಸುತ್ತೇವೆ. ಸತತವಾದ ಪ್ರಯತ್ನದ ಮೂಲಕ ಒಂದು ಮಗು 15 ದಿನಗಳಲ್ಲಿ ಅಥವಾ ಒಂದು ತಿಂಗಳಿನಲ್ಲಿ ಒಂದು, ಎರಡು ಪದ್ಯಗಳನ್ನು ಬರೆಯುತ್ತದೆ. ಆದರೆ ನಾವು ಈ ಪ್ರಯತ್ನದಿಂದ ಬೇರೆ ಕಲಿಕಾ ಫಲಿತಾಂಶಗಳತ್ತ ಸರಿದು ಬಿಟ್ಟರೆ ಆಗ, ಈ ಕೌಶಲದ ಅಭಿವೃದ್ಧಿಯ ಕೆಲಸವು ನಿಂತುಹೋಗುತ್ತದೆ. ಅಭ್ಯಾಸ ಇಲ್ಲದೆ ಇರುವುದರಿಂದ ಮಗು ಈ ಕೌಶಲವನ್ನು ಕ್ರಮೇಣ ಮರೆಯುತ್ತದೆ. ಈ ಕಾರಣದಿಂದಾಗಿ ಶಿಕ್ಷಕರು ಈ ಕೌಶಲಗಳು ಬಲಗೊಳ್ಳಲಿ ಮತ್ತು ಜೀವಂತವಾಗಿರಲಿ ಹಾಗೂ ಮಗು ಬೇರೆ ಬೇರೆ ವಿಷಯಗಳಲ್ಲಿ ಮತ್ತು ಬರೆವಣಿಗೆಯ ಶೈಲಿಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳಲಿ ಎಂದು ಶಾಲೆಗಳಲ್ಲಿ ಪದ್ಯ ಅಥವಾ ಕಥೆಯ ಪಠಣವನ್ನು ಸಂಘಟಿಸುತ್ತಾರೆ.


## ಶಾಲಾಪತ್ರಿಕೆ

ಮಕ್ಕಳಲ್ಲಿ ಸೃಜನಶೀಲತೆಯನ್ನು ಉತ್ತೇಜಿಸಲು ಹಾಗೂ ಬೆಳೆಸಲು ಇರುವ ಇನ್ನೊಂದು ಮಾರ್ಗವೆಂದರೆ ಅದು ಶಾಲಾಪತ್ರಿಕೆ. ನಾವು ಕಥೆಗಳನ್ನು, ಪದ್ಯಗಳನ್ನು, ಲೇಖನಗಳನ್ನು, ನಾಟಕಗಳನ್ನು, ಪುಸ್ತಕ ವಿಮರ್ಶೆಗಳನ್ನು, ಅನುಭವಗಳನ್ನು ವಿಚಾರಗಳನ್ನು, ಅಭಿಪ್ರಾಯಗಳನ್ನು ಮತ್ತು ಇತರ ಬರೆವಣಿಗೆಯ ರೂಪಗಳನ್ನು ಮಕ್ಕಳಿಂದ ಸಂಗ್ರಹಿಸುತ್ತೇವೆ. ಮತ್ತು ಅವುಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ. ವಿದ್ಯಾರ್ಥಿಗಳು ತಮ್ಮ ಸುತ್ತಮುತ್ತಲಿನ ಪರಿಸರ, ಜನರು, ಹಬ್ಬಗಳು, ಜಾತ್ರೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಬರೆಯುತ್ತಾರೆ. ಅಂತಹ ಕಾರ್ಯಕ್ರಮಗಳ ಪ್ರಾಮುಖ್ಯ, ಅವುಗಳ ಚರಿತ್ರೆ, ಅವುಗಳನ್ನು ಹೇಗೆ ಸಂಭ್ರಮದಿಂದ ಆಚರಿಸಲಾಗುತ್ತದೆ ಈ ವಿಷಯಗಳನ್ನೆಲ್ಲಾ ಅವರು ಸಂಶೋಧಿಸಿ ಬರೆವಣಿಗೆಯಲ್ಲಿ ಸೇರಿಸಿಕೊಳ್ಳುವಂತೆ ಅವರಿಗೆ ಪ್ರೋತ್ಸಾಹ ನೀಡಲಾಗುತ್ತದೆ. ತಾವು ಸಂಗ್ರಹಿಸಿರುವ ಮಾಹಿತಿಯೊಂದಿಗೆ ತಮ್ಮ ಆಲೋಚನೆಗಳನ್ನು ಸಹ ಅಭಿವ್ಯಕ್ತಿಸುತ್ತಾ ಮತ್ತು ತಾರ್ಕಿಕವಾಗಿ ವಿಚಾರವನ್ನು ಪ್ರತಿಪಾದಿಸುವುದು ಮತ್ತು ಸತತವಾಗಿ ಕೌಶಲವನ್ನು ಮುಂದಿಡುವುದು ಅವರಿಗೆ ಮೇಲಿನ ತರಗತಿಗಳಲ್ಲಿ ಮಾತ್ರವಲ್ಲ, ಬದುಕಿನುದ್ದಕ್ಕೂ ಆವಶ್ಯಕವಾಗಿರುತ್ತವೆ.


## ಮಾರ್ಗದರ್ಶನವನ್ನು ನೀಡುವುದು

ಈ ಬರೆವಣಿಗೆಯ ಚಟುವಟಿಕೆಗಳಲ್ಲಿ ಮಕ್ಕಳಿಗೆ ಮಾರ್ಗದರ್ಶನ ಅಗತ್ಯವಾಗುತ್ತದೆ. ಶಿಕ್ಷಕರು, ಕಾರ್ಯಾಗಾರಗಳನ್ನು ಸಂಘಟಿಸಿ ಅನುಭವ ಇರುವ ಲೇಖಕರನ್ನು ಮಕ್ಕಳಿಗೆ ತಮ್ಮದೇ ಆದ ಕಥೆಗಳನ್ನು ಮತ್ತು ಪದ್ಯಗಳನ್ನು ಬರೆಯುವುದಕ್ಕೆ ಮಾರ್ಗ–ದರ್ಶನ ನೀಡಲು ಆಹ್ವಾನಿಸಬಹುದು. ಈ ರೀತಿಯಲ್ಲಿ ಸೃಜನಶೀಲ ಬರೆವಣಿಗೆಯಲ್ಲಿ ಕ್ರಿಯಾಶೀಲವಾಗಿ ತೊಡಗಿ–ಕೊಳ್ಳಲು ಅವರಿಗೆ ಪ್ರಚೋದನೆ ನೀಡಬಹುದು. ವಿಶೇಷದಿನಗಳ ಆಚರಣೆ ಮತ್ತು ಹಬ್ಬಗಳ ಸಂದರ್ಭದಲ್ಲಿ ಅವುಗಳ ಬಗ್ಗೆ ತಮ್ಮ ಆಲೋಚನೆಗಳನ್ನು ಅಭಿವ್ಯಕ್ತಿಸಲು ವಿದ್ಯಾರ್ಥಿಗಳಿಗೆ ಅವಕಾಶವನ್ನು ನೀಡಬಹುದು.

ಈ ಚಟುವಟಿಕೆಗಳನ್ನು ಶಾಲೆಯ ಹೊರಗಡೆಯೂ ವಿಸ್ತರಿಸಬೇಕಾಗುತ್ತದೆ. ಉದಾಹರಣೆಗೆ ವಿದ್ಯಾರ್ಥಿಗಳಿಗಾಗಿ ಅವರ ಹಳ್ಳಿಯಲ್ಲಿ ಅಥವಾ ಸಮುದಾಯದಲ್ಲಿ ಓದುವ ವೃಂದಗಳನ್ನು (ಕ್ಲಬ್) ರಚಿಸುವುದು. ಮಕ್ಕಳು ಜೋಡಿಯಾಗಿ ಅಥವಾ ಗುಂಪುಗಳಲ್ಲಿ ಕೆಲಸ ಮಾಡಲು ಪ್ರೋತ್ಸಾಹಿಸಿ, ಅವರು ಒಬ್ಬರು ಮತ್ತೊಬ್ಬರನ್ನು ಪ್ರೇರೇಪಿಸುವಂತೆ ನೋಡಿಕೊಳ್ಳಬೇಕು. ಪರಸ್ಪರ ವಿಚಾರಗಳನ್ನು ಹಂಚಿಕೊಳ್ಳುವುದೂ ಸಹ ಅವರ ಸೃಜನಶೀಲತೆ ಮತ್ತು ಬರೆಯುವ ಕೌಶಲಗಳನ್ನು ಉತ್ತಮ–ಪಡಿಸಿಕೊಳ್ಳಲು ನೆರವಾಗುತ್ತದೆ. ಬರೆಯುವುದು ಒಂದು ಅಗತ್ಯವಾದ ಕೌಶಲ ಮತ್ತು ಅದನ್ನು ಬಲಪಡಿಸುವುದು ಹಾಗೂ ಅದಕ್ಕಾಗಿ ಅಭ್ಯಾಸಮಾಡುವುದು ಅಗತ್ಯ ಎಂಬುದನ್ನು ಶಿಕ್ಷಕರು ಮನವರಿಕೆ ಮಾಡಿಕೊಳ್ಳಬೇಕಾದದ್ದು ಅತ್ಯಂತ ಮುಖ್ಯವಾದದ್ದು. ಈ ಕೌಶಲಗಳನ್ನು ಬಲಪಡಿಸಿಕೊಳ್ಳಲು ಅವಕಾಶಗಳನ್ನು ಶಿಕ್ಷಕರು ಸೃಷ್ಟಿಸಬೇಕು.




ಚಿತ್ರ 1: ಲಿಂಗತ್ವ ತಾರತಮ್ಯದ ಕುರಿತು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ವಿದ್ಯಾರ್ಥಿಯೊಬ್ಬರು ಚಿತ್ರ ಬರೆದು ಬರೆವಣಿಗೆ ಮಾಡಿರುವುದು.




**ಚಿತ್ರ 2: ಶಾಲೆಯಲ್ಲಿ ನಡೆದ ಕ್ರೀಡಾ ದಿನದ ಆಚರಣೆಯನ್ನು ವಿದ್ಯಾರ್ಥಿಯೊಬ್ಬರು ವಿವರಿಸಿರುವುದು.**

---



**ಕಲಂದರ್. ಎಸ್,** ಅವರು ಯಾದಗಿರಿಯ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಕನ್ನಡವನ್ನು ಕಲಿಸುತ್ತಾರೆ ಇವರು ಸ್ನಾತಕೋತ್ತರ ಪದವೀಧರರಾಗಿದ್ದು ಎಲ್ಲಾ ತರಗತಿಗಳಿಗೂ ಪಾಠಮಾಡುತ್ತಾರೆ. kalandar.s@azimpremjifoundation.org

ಅನುವಾದ: **ಬಿ.ಆರ್. ಮಂಜುನಾಥ್** | ಪರಿಶೀಲನೆ: **ಶ್ಯಾಮರಾವ್**